

ಸದಾಗಮ್ಯೈಕವಿಜ್ಞೇಯಂ ಸಮತೀತಕ್ಷರಾಕ್ಷರಮ್।
ನಾರಾಯಣಂ ಸದಾ ವಂದೇ ನಿರ್ದೋಷಾಶೇಷಸದ್ಗುಣಮ್॥

ಬ್ರಹ್ಮಾಂತಾ ಗುರವಃ ಸಾಕ್ಷಾತ್ ಇಷ್ಟಂ ದೈವಮ್ ಶ್ರಿಯಃ ಪತಿಃ।
ಆಚಾರ್ಯಾಃ ಶ್ರೀಮದಾಚಾರ್ಯಾಃ ಸಂತುಮೆ ಜನ್ಮ ಜನ್ಮನಿ॥

ಮನ್ಮನೋಭೀಷ್ಟವರದಂ ಸರ್ವಾಭೀಷ್ಟಫಲಪ್ರದಂ।
ಪುರಂದರಗುರುಂವಂದೇದಾಸಶ್ರೇಷ್ಠಂ ದಯಾನಿಧಿಂ॥

ದಾಸ ಕಕ್ಷ

ಸತತ ಗಣನಾಥ

ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ।
ಮತಿ ಪ್ರೇರಿಸುವಳು ಪಾರ್ವತಿದೇವಿ।।ಮು।।

ಕುತಿ ಪಥಕೆ ಮನವೀವ ಮಹಾರುದ್ರದೇವರು।
ಹರಿಭಕುತಿ ದಾಯಕಳು ಭಾರತಿದೇವಿ।

ಯುಕುತಿ ಶಾಸ್ತ್ರಗಳಲ್ಲಿ ವನಜಸಂಭವನರಸಿ।
ಸತ್ಕರ್ಮಗಳ ನಡೆಸಿ ಸುಜ್ಞಾನ ಮತಿ ಇತ್ತು।

ಗತಿ ಪಾಲಿಸುವ ನಮ್ಮ ಪವಮಾನನು।
ಚಿತ್ತದಲಿ ಆನಂದ ಸುಖವನೀವಳು ರಮಾ।

ಭಕುತ ಜನರೊಡೆಯ ನಮ್ಮ ಪುರಂದರ ವಿಠಲನು।
ಸತತ ಇವರಲಿ ನಿಂತು ಈ ಕೃತಿಯ ನಡೆಸುವನು

ಗುರುಮಧ್ವರಾಯರಿಗೆ ನಮೋ

ಗುರುಮಧ್ವರಾಯರಿಗೆ ನಮೋ ನಮೋ
ನಮ್ಮ ಗುರುಮಧ್ವ ಸಂತತಿಗೆ ನಮೋ ನಮೋ

ಶ್ರೀಪಾದರಾಜರಿಗೆ ಗುರುವ್ಯಾಸರಾಜರಿಗೆ।
ಗುರುವಾದಿರಾಜರಿಗೆ ನಮೋ ನಮೋ॥೧॥

ರಾಘವೇಂದ್ರರಾಯರಿಗೆ ವೈಕುಂಠದಾಸರಿಗೆ
ಪುರಂದರದಾಸರಿಗೆ ನಮೋ ನಮೋ॥೨॥

ಗುರು ವಿಜಯದಾಸರಿಗೆ ಭಾಗಣ್ಣದಾಸರಿಗೆ
ಶ್ರೀರಂಗವಲಿದ ದಾಸರಿಗೆ ನಮೋ ನಮೋ॥೩॥

ಪರಮ ವೈರಾಗ್ಯಶಾಲಿ ತಿಮ್ಮಣ್ಣದಾಸರಿಗೆ
ಹುಂಡೇಕಾರ ದಾಸರಿಗೆ ನಮೋ ನಮೋ॥೪॥

ಗುರು ಶ್ರೀಶವಿಠಲನ ಪರಮ ಭಕ್ತರ ಚರಣ
ಸರಸಿಜಯುಗಗಳಿಗೆ ನಮೋ ನಮೋ॥೫॥

ಗುರುಮಧ್ವರಾಯರಿಗೆ ನಮೋ ನಮೋ
ನಮ್ಮ ಗುರುಮಧ್ವ ಸಂತತಿಗೆ ನಮೋ ನಮೋ॥ಪ॥

ಶ್ರೀ ಗುರು ಗೊವಿಂದ ದಾಸರು

ಸರ್ವ ಶಾಸ್ತ್ರಾರ್ಥ ಸಾರಜ್ಞಾನ್ ಚಿತ್ರ ಲೇಖಿ ನತಃ ಪರಾನ್
ಗುರು ಗೋವಿಂದ ದಾಸಾರ್ಯಾನ್ ನಿತ್ಯಂ ನೌಮಿ ಸತಾಂ ಮುಧೇ

ಶ್ರೀ ಜಗನ್ನಾಥ ದಾಸರು

ಜಲಜೇಷ್ಟನಿಭಾಕಾರಂ ಜಗದೀಶಪದಾಶ್ರಯಂ।
ಜಗತೀತಲವಿಖ್ಯಾತಂ ಜಗನ್ನಾಥ ಗುರುಂ ಭಜೇ॥

ಶ್ರೀ ಗೋಪಾಲದಾಸರು

ಭೂಪಾಲನತ ಪಾದಾಬ್ಜಂ ಪಾಪಾಲಿ ಪರಿಹಾರಿಣಂ
ಗೋಪಾಲದಾಸ ಮೀಡೇಹಂ ಗೋಪಾಲ ಹರಿದರ್ಶನಂ

ಶ್ರೀ ವಿಜಯ ದಾಸರು

ಅಜ್ಞಾನತಿಮಿರಚ್ಛೇದಂ ಬುದ್ಧಿಸಂಪತ್ ಪ್ರದಾಯಕಂ।
ವಿಜ್ಞಾನವಿಮಲಂ ಶಾಂತಂ ವಿಜಯಾಖ್ಯಗುರುಂ ಭಜೇ॥

ಸ್ಮರಿಸಿ ಬದುಕಿರೊ

ಸ್ಮರಿಸಿ ಬದುಕಿರೊ ದಿವ್ಯ ಚರಣಕೆರಗಿರೊ
ದುರಿತ ತರಿದು ಪೊರೆವ ವಿಜಯಗುರುಗಳೆಂಬರ ॥ಪ॥

ದಾಸರಾಯನ ದಯವ ಸೂಸಿ ಪಡೆದನ
ದೋಷರಹಿತನ ಸಂತೋಷಭರಿತನ ॥೧॥

ಜ್ಞಾನವಂತನ ದಯ ನಿಧಾನ ಶಾಂತನ
ಮಾನ್ಯವಂತನ ಬಲು ವದಾನ್ಯದಾಂತನ ॥೨॥

ಹರಿಯ ಭಜಿಸುವ ನರಹರಿಯ ಯಜಿಸುವ
ದುರಿತ ತ್ಯಜಿಸುವ ಜನಕೆ ಹರುಷ ಸುರಿಸುವ ॥೩॥

ಮೋದಭರಿತನ ಪಂಚಭೇದವರಿತನ
ಸಾಧುಚರಿತನ ಮನೋವಿಷಾದ ಮರೆತನ ॥೪॥

ಇವರ ನಂಬಿದ ಜನಕೆ ಭವವಿದೆಂಬುದು
ಹವಣವಾಗದು ನಮ್ಮವರ ಮತವಿದು ॥೫॥

ಪಾಪಕೋಟಿಯ ರಾಶಿ ಲೇಪವಾಗದು
ತಾಪ ಕಳೆವನು ಬಲು ದಯಾಪಯೋನಿಧಿ ॥೬॥

ಕವನರೂಪದಿ ಹರಿಯ ಸ್ತವನ ಮಾಡಿದ
ಭುವನ ಬೇಡಿದ ಮಾಧವನ ನೋಡಿದ ॥೭॥

ರಂಗನೆಂದನ ಭವವು ಹಿಂಗಿತೆಂದನ
ಮಂಗಳಾಂಗನ ಅಂತರಂಗವರಿತನ ॥೮॥

ಕಾಶಿನಗರದಲ್ಲಿದ್ದ ವ್ಯಾಸದೇವನ
ಸೂಸಿ ಭಜಿಸಿದ ಉಲ್ಲಾಸಭರಿತನ ॥೯॥

ಚಿಂತೆ ಬ್ಯಾಡಿರೋ ನಿಶ್ಚಿಂತರಾಗಿರೋ
ಶಾಂತಗುರುಗಳಾ ಪಾದವಾಂತು ನಂಬಿರೋ ॥೧೦॥

ಖೇದವಾಗದು ನಿಮಗೆ ಮೋದವಾಹುದು
ಆದಿ ದೇವನ ಸುಪ್ರಸಾದವಾಹುದು ॥೧೧॥

ತಾಪ ತಡೆವನೋ ಬಂದ ಪಾಪ ಕಡಿವನೋ
ಶ್ರೀಪತೀಶನ ಪದಸಮೀಪವಿಡುವನೋ ॥೧೨॥

ಗಂಗೆ ಮಿಂದರೆ ಮಲವು ಹಿಂಗಿತಲ್ಲದೆ
ರಂಗನೊಲಿಯನು ಭಕ್ತರ ಸಂಗ ದೊರೆಯದೆ ॥೧೩॥

ವೇದವೋದಲು ಮರಿದೆ ವಾದ ಮಾಡಲು
ಹಾದಿ ದೊರೆಯದು ಬುಧರ ಪಾದ ನಂಬಿದೆ ॥೧೪॥

ಲೆಕ್ಕವಿಲ್ಲದ ದೇಶ ತುಕ್ಕಿ ಬಂದರೂ
ದು:ಖವಲ್ಲದೆ ಲೇಶ ಭಕ್ತಿ ದೊರಕದು ॥೧೫॥

ದಾನ ಮಾಡಲು ದಿವ್ಯ ಗಾನ ಪಾಡಲು
ಜ್ಞಾನ ದೊರೆಯದು ಇವರಧೀನವಾಗದೆ ॥೧೬॥

ನಿಷ್ಠೆ ಯಾತಕೆ ಕಂಡ ಕಷ್ಟವ್ಯಾತಕೆ
ದಿಟ್ಟ ಗುರುಗಳ ಪಾದ ಮುಟ್ಟಿ ಭಜಿಸಿರೋ ॥೧೭॥

ಪೂಜೆ ಮಾಡಲು ಕಂಡ ಗೋಜು ಬೀಳಲು
ಬೀಜಮಾತಿನ ಫಲ ಸಹಜ ದೊರಕದು ॥೧೮॥

ಸುರರು ಎಲ್ಲರು ಇವರ ಕರವ ಪಿಡಿವರು
ತರಳರಂದದಿ ಹಿಂದೆ ತಿರುಗುತಿಪ್ಪರು ॥೧೯॥

ಗ್ರಹಗಳೆಲ್ಲವು ಇವರ್ಗೆ ಸಹಾಯವಾಗುತ
ಅಹೋರಾತ್ರಿಲಿ ಸುಖದ ನಿವಹ ಕೊಡುವವು ॥೨೦॥

ವ್ಯಾಧಿ ಬಾರದೊ ದೇಹಬಾಧೆ ತಟ್ಟದೊ
ಆದಿದೇವನ ಸುಪ್ರಸಾದವಾಹುದೊ ॥೨೧॥

ಪತಿತಪಾಮರ ಮಂದಮತಿಯು ನಾ ಬಲು
ತುತಿಸಲಾಪನೆ ಇವರ ಅತಿಶಯಂಗಳ ॥೨೨॥

ಕರುಣದಿಂದಲಿ ಎಮ್ಮ ಪೊರೆವನಲ್ಲದೆ
ದುರಿತಕೋಟಿಯು ಬೇಗ ತರಿವ ದಯದಲಿ ॥೨೩॥

ಮಂದಮತಿಗಳು ಇವರ ಛಂದವರಿಯದೆ
ನಿಂದಿಸುವರು ಭವದ ಬಂಧ ತಪ್ಪದು ॥೨೪॥

ಇಂದಿರಾಪತಿ ಇವರ ಮುಂದೆ ಕುಣಿವನು
ಅಂದ ವಚನವ ನಿಜಕೆ ತಂದು ತೋರ್ಪನು ॥೨೫॥

ಉದಯಕಾಲದಿ ಈ ಪದವ ಪಠಿಸಲು
ಮದಡನಾದರೂ ಜ್ಞಾನ ಉದಯವಾಹುದು ॥೨೬॥

ಸಟೆಯಿದಲ್ಲವೋ ವ್ಯಾಸವಿಠಲ ಬಲ್ಲನೋ
ಪಠಿಸಬಹುದಿದು ಕೇಳಿ ಕುಟಿಲರಹಿತರು ॥೨೭॥

ಶ್ರೀ ಕನಕ ದಾಸರು

ಶ್ರೀ ಕನಕ ದಾಸ ವರದ ಗೋವಿಂದ ಗೋವಿಂದ

ಶ್ರೀ ಪುರಂದರ ದಾಸರು

ಮನ್ಮನೋಭೀಷ್ಟವರದಂ ಸರ್ವಾಭೀಷ್ಟಫಲಪ್ರದಂ।
ಪುರಂದರಗುರುಂವಂದೇದಾಸಶ್ರೇಷ್ಠಂ ದಯಾನಿಧಿಂ॥

ಯತಿ ಕಕ್ಷ

ಶ್ರೀ ಸತ್ಯ ಪ್ರವೋದ ತೀರ್ಥ

ಸತ್ಯಾಽಭಿಜ್ಞ ಕರಾಭ್ಜೋತಾನ್ ಪಂಚಾಷಟ್ ವರುಷ ಪೂಜಾತಾನ್।
ಸತ್ಯಪ್ರವೋದ ತೀರ್ಥಾರ್ಯಾನ್ ನವಮಿನ್ ನ್ಯಾಯಸುಧಾರತಾನ್॥

ಶ್ರೀ ರಾಘವೇಂದ್ರ ತೀರ್ಥರು

ಪೂಜ್ಯಾಯ ರಘವೇಂದ್ರಾಯ ಸತ್ಯಧರ್ಮ ರತಾಯಚ।
ಭಜತಾಂ ಕಲ್ಪವೃಕ್ಷಾಯಾ ನಮತಾಂ ಕಾಮಧೇನುವೆ॥

ಶ್ರೀ ರಘೋತ್ತಮ ತೀರ್ಥರು

ರಘೋತ್ತಮ ಗುರುಮ್ ವಂದೇ ರಘೋತ್ತಮ ಪಾದಾರ್ಚಕಮ್।
ಗಂಭೀಃರ್ಯೆನಾರ್ಥ ಬಹುಲ್ಯ ಟೀಕ ತಾತ್ಪರ್ಯ ಬೊಧಕಮ್॥

ಶ್ರೀ ವಿಜಯೇಂದ್ರ ತೀರ್ಥರು

ಭಕ್ತಾನಾಂ ಮಾನಸಂ ಭೋಜ ಭಾನವೆ ಕಾಮಧೇನವೆ
ನಮತಾಂ ಕಲ್ಪತರುವೆ ಜಯೀಂದ್ರ ಗುರವೇ ನಮಃ

ಶ್ರೀ ವಾದಿರಜ ತೀರ್ಥರು

ತಪೋವಿದ್ಯಾವಿರಕ್ತ್ಯಾದಿ ಸದ್ಗುಣೌಘಾಕರಾನಹಂ।
ವಾದಿರಾಜಗುರೂನ್ ವಂದೇ ಹಯಗ್ರೀವದಯಾಶ್ರಯಾನ್॥

ಶ್ರೀ ವ್ಯಾಸರಾಜ ತೀರ್ಥರು

ಅರ್ಥಿಕಲ್ಪಿತಕಲ್ಪೋಯಂ ಪ್ರತ್ಯರ್ಥಿ ಗಜಕೇಸರಿ।
ವ್ಯಾಸತೀರ್ಥಗುರುರ್ಭೂಯಾದಸ್ಮದಿಷ್ಟಾರ್ಥಸಿದ್ಧಯೇ॥

ಶ್ರೀ ಶ್ರೀಪಾದರಾಜ ತೀರ್ಥರು

ಕಾಲೇ ಫಲತಿ ಸುರದ್ರುಃ ಚಿಂತಾಮಣಿರಪಿ ಯಾಚನೇ ದಾತಾ।
ವರ್ಷತಿ ಸಕಲಮಭೀಷ್ಟಂ ದರ್ಶನಮಾತ್ರಾತ್ ಶ್ರೀಪಾದರಾಣ್ಮನಿಃ॥

ಶ್ರೀ ಜಯತೀರ್ಥರು

ಮಿಥ್ಯಾಸಿದ್ಧಾಂತದುರ್ಧ್ವಾಂತವಿಧ್ವಂಸನವಿಚಕ್ಷಣಃ।।
ಜಯತೀರ್ಥಾಖ್ಯತರಣಿರ್ಭಾಸತಾಂನೋ ಹೃದಂಬರೇ।।

ಶ್ರೀ ಅಕ್ಷೋಭ್ಯ ತೀರ್ಥರು

ಶ್ರೀ ಅಕ್ಷೋಭ್ಯ ತೀರ್ಥ ವರದ ಗೋವಿಂದ ಗೋವಿಂದ

ಶ್ರೀ ಮಾಧವ ತೀರ್ಥರು

ಶ್ರೀ ಮಾಧವ ತೀರ್ಥ ವರದ ಗೋವಿಂದ ಗೋವಿಂದ

ಶ್ರೀ ನರಹರಿ ತೀರ್ಥರು

ಶ್ರೀ ನರಹರಿ ತೀರ್ಥ ವರದ ಗೋವಿಂದ ಗೋವಿಂದ

ಶ್ರೀ ಪದ್ಮನಾಭ ತೀರ್ಥರು

ಶ್ರೀ ಪದ್ಮನಾಭ ತೀರ್ಥ ವರದ ಗೋವಿಂದ ಗೋವಿಂದ

ಶ್ರೀ ಆನಂದ ತೀರ್ಥರು

ಪಂಚಭೇದಾತ್ಮಕ ಪ್ರಪಂಚಕೆ।
ಪಂಚರೂಪಾತ್ಮಕನೆ ದೈವಕ।
ಪಂಚಮುಖಶಕ್ರಾದಿಗಳು ಕಿಂಕರರು ಶ್ರೀಹರಿಗೆ।।
ಪಂಚವಿಂಶತಿ ತತ್ತ್ವ ತರತಮ।
ಪಂಚಿಕೆಗಳನು ಪೇಳ್ದ ಭಾವಿ ವಿ।
ರಿಂಚಿಯೆನಿಪಾನಂದತೀರ್ಥರ ನೆನೆವೆನನುದಿನವು।।

ಅಭ್ರಮಂ ಭಂಗ ರಹಿತಂ ಅಜಡಂ ವಿಮಲಂ ಸದಾ
ಆನಂದತೀರ್ಥ ಮಥುಲಂ ಭಜೇ ತಾಪತ್ರಯಾಪಹಂ

ದೇವತಾ ಕಕ್ಷ

ಸತ್ಯ ಜಗತಿದು

ಸತ್ಯ ಜಗತಿದು ಪಂಚಭೇದವು ನಿತ್ಯ ಶ್ರೀ ಗೋವಿಂದನ॥ಪ॥
ಕೃತ್ಯವರಿತು ತಾರತಮ್ಯದಿ ಕೃಷ್ಣನಧಿಕೆಂದು ಸಾರಿರೈ॥ಅ.ಪ॥

ಜೀವ ಈಶಗೆ ಭೇದ, ಸರ್ವತ್ರ ಜೀವ ಜೀವಕೆ ಭೇದವು।
ಜೀವ ಜಡ, ಜಡ ಜಡಕೆ ಭೇದ ಜೀವ ಜಡ ಪರಮಾತ್ಮಗೆ॥೧॥

ಮಾನುಷೋತ್ತಮಗಧಿಪ ಕ್ಷಿತಿಪರು ಮನುಜದೇವ ಗಂಧರ್ವರು।
ಜಾನಪಿತ್ರಾಜಾನಕರ್ಮಜದಾನವಾರಿತತ್ವಾತ್ಮರು॥೨॥

ಗಣಪ ಮಿತ್ರರು ಸಪ್ತಿ ಋಷಿಗಳು ವಹ್ನಿ ನಾರದ ವರುಣನು।
ಇನಜಗೆ ಸಮ ಚಂದ್ರಸೂರ್ಯರು ಮನುಸುತೆಯು ಹೆಚ್ಚು ಪ್ರವಹನು॥೩॥

ದಕ್ಷಸಮ ಅನಿರುಧ– ಗುರು ಶಚಿ– ರತಿ ಸ್ವಾಯಂಭುವರಾರ್ವರು।
ಪಕ್ಷ ಪ್ರಾಣನಿಗಿಂತ ಕಾಮನು ಕಿಂಚಿದಧಿಕನು ಇಂದ್ರನು॥೪॥

ದೇವೇಂದ್ರನಿಗಿಂದಧಿಕ ಮಹರುದ್ರದೇವ ಸಮಶೇಷಗರುಡರು।
ಕೇವಲಧಿಕರು ಶೇಷಗರುಡಗೆ ದೇವಿ ಭಾರತಿ ಸರಸ್ವತಿ॥೫॥

ವಾಯುವಿಗೆ ಸಮರಿಲ್ಲ ಜಗದೊಳು ವಾಯುದೇವರೆ ಬ್ರಹ್ಮರು।
ವಾಯು ಬ್ರಹ್ಮಗೆ ಕೋಟಿ ಗುಣದಿಂದ ಅಧಿಕ ಶಕ್ತಳು ಶ್ರೀ ರಮಾ॥೬॥

ಅನಂತ ಗುಣದಿಂ ಲಕುಮಿಗಧಿಕನು ಶ್ರೀ ಪುರಂದರ ವಿಠಲನು।
ಘನ ಸಮರು ಇವಗಿಲ್ಲ ಜಗದೊಳು ಹನುಮಹೃತ್ಪದ್ಮವಾಸಿಗೆ॥೭॥

ಶ್ರೀ ಗಣಪತಿ ದೇವರು

ಕಡುಕರುಣಿ ನೀನೆಂದರಿದು ಹೇ।
ರೊಡಲ ನಮಿಸುವೆ ನಿನ್ನಡಿಗೆ ಬೆಂ।
ಬಿಡದೆ ಪಾಲಿಸು ಪರಮಕರುಣಾಸಿಂಧು ಎಂದೆಂದು॥
ನಡುನಡುವೆ ಬರುತಿಪ್ಪ ವಿಘ್ನವ।
ತಡೆದು ಭಗವನ್ನಾಮಕೀರ್ತನೆ।
ನುಡಿದು ನುಡಿಸೆನ್ನಿಂದ ಪ್ರತಿದಿವಸದಲಿ ಮರೆಯದಲೆ॥

ಮೊದಲ್ವಂದಿಪೆ ನಿನಗೆ ಗಣನಾಥ

ಮೊದಲ್ವಂದಿಪೆ ನಿನಗೆ ಗಣನಾಥ
ಬಂದ ವಿಘ್ನ ಕಳೆಯೊ ಗಣನಾಥ

ಹಿಂದೆ ರಾವಣನು ಮದದಿಂದ ನಿನ್ನ ಪೂಜಿಸದೆ
ಸಂದ ರಣದಲ್ಲಿ ಗಣನಾಥ

ಮಾಧವನ ಆಜ್ಞೆಂದ ಧಮರಾಯ ಪೂಜಿಸಲು
ಸಾಧಿಸಿದ ರಾಜ್ಯ ಗಣನಾಥ

ಮಂಗಳ ಮೂರಿತಿ ಗುರು ರಂಗ ವಿಠಲನ ಪದ
ಹಿಂಗದೆ ಪಲಿಸೊ ಗಣನಾಥ

ಶ್ರೀ ಪಾರ್ವತಿ ದೇವಿಯರು

ಆ ಪರಂತಪನೊಲುಮೆಯಿಂದ ಸ।
ದಾಪರೋಕ್ಷಿಗಳೆನಿಸಿ ಭಗವ।
ದ್ರೂಪಗುಣಗಳ ಮಹಿಮೆ ಸ್ವಪತಿಗಳಾನನದಿ ತಿಳಿವ।।
ಸೌಪರಣಿ ವಾರುಣಿ ನಗಾತ್ಮಜ।
ರಾಪನಿತು ಬಣ್ಣಿಸುವೆ ಎನ್ನ ಮ।
ಹಾಪರಾಧಗಳೆಣಿಸದೀಯಲಿ ಪರಮ ಮಂಗಳವ।।

ಶ್ರೀ ರುದ್ರ ದೇವರು

ನಂದಿವಾಹನ ನಳಿನಿಧರ ಮೌ।
ಳೇಂದುಶೇಖರ ಶಿವ ತ್ರಿಯಂಬಕ।
ಅಂಧಕಾಸುರಮಥನ ಗಜ ಶಾರ್ದೂಲಚರ್ಮಧರ।
ಮಂದಜಾಸನತನಯ ತ್ರಿಜಗ।
ದ್ವಂದ್ಯ ಶುದ್ಧ ಸ್ಫಟಿಕ ಸನ್ನಿಭ।
ವಂದಿಸುವೆನನವರತ ಪಾಲಿಸೋ ಪಾರ್ವತೀರಮಣ।।

ಧವಳಗಂಗೆಯ ಗಂಗಾಧರ

ಧವಳಗಂಗೆಯ ಗಂಗಾಧರ ಮಹಾಲಿಂಗ ಮಾ
ಧವನ ತೋರಿಸಯ್ಯ ಗುರುಕುಲೋತ್ತುಂಗ।।ಪ।।

ಅರ್ಚಿಸಿದವರಿಗಭೀಷ್ಟವ ಕೊಡುವ

ಹೆಚ್ಚಿನ ಅಘಗಳ ತರಿದು ಬಿಸುಟುವ
ದುಶ್ಚರಿತಗಳೆಲ್ಲ ದೂರದಲ್ಲಿಡುವ ನ
ಮ್ಮಚ್ಯುತಗಲ್ಲದ ಅಸುರರ ಬಡಿವಾ॥೧॥

ಮಾರನ ಗೆದ್ದ ಮನೋಹರ ಮೂರ್ತಿ
ಸಾಧು ಸಜ್ಜನರಿಗೆ ಸುರಚಕ್ರವರ್ತಿ
ಧಾರುಣಿಯೊಳಗೆ ತುಂಬಿದೆ ನಿಮ್ಮ ಕೀರ್ತಿ
ಮೂರಾರಿಯ ತೋರಿಸಯ್ಯ ನಿಮಗೆ ಶರಣಾರ್ಥಿ॥೨॥

ಚನ್ನ ಪ್ರಸನ್ನ ಶ್ರೀ ಹಯವದನನ್ನ
ಅನುದಿನ ನೆನೆವಂತೆ ಮಾಡೊ ನೀ ಎನ್ನ
ಅನ್ಯನಲ್ಲವೊ ನಾನು ಗುರುವೆಂಬೆ ನಿನ್ನ
ಇನ್ನಾದರೂ ತೋರೊ ಧೀರ ಮುಕ್ಕಣ್ಣ॥೩॥

ಧವಳಗಂಗೆಯ ಗಂಗಾಧರ ಮಹಾಲಿಂಗ ಮಾ
ಧವನ ತೋರಿಸಯ್ಯ ಗುರುಕುಲೋತ್ತುಂಗ॥

ಶ್ರೀ ಶೇಷದೇವರು

ಯೋಗಿಗಳ ಹೃದಯಕೆ ನಿಲುಕ ನಿಗ।
ಮಾಗವ್ಯೈಕವಿನುತನ ಪರಮನು।
ರಾಗದಿಂ ದ್ವಿಸಹಸ್ರ ಜಿಹ್ವೆಗಳಿಂದ ವರ್ಣಿಸುವ॥
ಭೂಗಗನಪಾತಾಳವ್ಯಾಪ್ತನ।
ಯೋಗನಿದ್ರಾಸ್ಪದನೆನಿಪ ಗುರು।
ನಾಗರಾಜನ ಪದಕೆ ನಮಿಸುವೆ ಮನದೂಳನವರತ॥

ಶ್ರೀ ಗರುಡ ದೇವರು

ಜಗದುದರನ ಸುರೋತ್ತಮನ ನಿಜ।
ಪೆಗಲೊಳಾಂತು ಕರಾಬ್ಜದೋಳ್ ಪದ।
ಯುಗ ಧರಿಸಿ ನಖಪಂಕ್ತಿಯೊಳು ರಮಣೀಯತರವಾದ।
ನಗಧರನ ಪ್ರತಿಬಿಂಬ ಕಾಣುತ।
ಮಿಗೆ ಹರುಷದಿಂ ಪೊಗಳಿ ಹಿಗ್ಗುವ।
ಖಗಕುಲಾಧಿಪ ಕೊಡಲಿ ಮಂಗಳ ಸಕಲ ಸುಜನರಿಗೆ॥

ಶ್ರೀ ಭಾರತೀ ದೇವಿಯರು

ಕೃತಿರಮಣ ಪ್ರದ್ಯುಮ್ನನಂದನೆ।
ಚತುರವಿಂಶತಿ ತತ್ತ್ವಪತಿ ದೇ।
ವತೆಗಳಿಗೆ ಗುರುವೆನೆಸುತಿಹ ಮಾರುತನ ನಿಜಪತ್ನಿ॥

ಸತತ ಹರಿಯಲಿ ಗುರುಗಳಲಿ ಸ।
ದ್ರತಿಯ ಪಾಲಿಸಿ ಭಾಗವತ ಭಾ।
ರತ ಪುರಾಣ ರಹಸ್ಯ ತತ್ತ್ವ ಗಳರಪು ಕರುಣದಲಿ।।

ಶ್ರೀ ಸರಸ್ವತಿದೇವಿಯರು
————————————
ಚತುರವದನನ ರಾಣಿ ಅತಿರೋ।
ಹಿತ ವಿಮಲ ವಿಜ್ಞಾನಿ ನಿಗಮ।
ಪ್ರತತಿಗಳಿಗಭಿಮಾನಿ ವೀಣಾಪಾಣಿ ಬ್ರಹ್ಮಾಣಿ।।
ನತಿಸಿ ಬೇಡುವೆ ಜನನಿ ಲಕ್ಷ್ಮೀ।
ಪತಿಯ ಗುಣಗಳ ತುತಿಪುದಕೆ ಸ।
ನ್ಮತಿಯ ಪಾಲಿಸಿ ನೆಲೆಸು ನೀ ಮಧ್ವದನಸದನದಲಿ।।

ಶ್ರೀ ಮುಖ್ಯಪ್ರಾಣದೇವರು
————————————
ಆರು ಮೂರೆರಡೊಂದು ಸಾವಿರ।
ಮೂರೆರಡು ಶತಶ್ವಾಸ ಜಪಗಳ।
ಮೂರು ವಿಧ ಜೀವರೊಳಗಬ್ಜಜಕಲ್ಪ ಪರಿಯಂತ।
ತಾ ರಚಿಸಿ ಸತ್ವರಿಗೆ ಸುಖ ।
ಸಂಸಾರ ಮಿಶ್ರರಿಗಧಮಜನರಿಗ।
ಪಾರ ದುಃಖಗಳೀವ ಗುರುಪವಮಾನ ಸಲಹೆಮ್ಮ।।

ಪವಮಾನ ಪವಮಾನ
————————————
ಪವಮಾನ ಜಗದಪ್ರಾಣಾ ಸಂಕರುಷಣ–
ಭವ, ಭಯಾರಣ್ಯ ದಹನ।।ಪ।।
ಶ್ರವಣವೆ ಮೊದಲಾದ ನವವಿಧ ಭಕುತಿಯ।
ತವಕದಿಂದಲಿ ಕೊಡು ಕವಿಜನ ಪ್ರಿಯಾ।।ಅ.ಪ।।

ಹೇಮಕಚ್ಚುಟ ಉಪವೀತ ಧರಿಪ ಮಾರುತ।
ಕಾಮಾದಿ ವರ್ಗರಹಿತ।।
ವ್ಯೋಮಾದಿ ಸರ್ವ ವ್ಯಾಪುತ ಸತತ ನಿರ್ಭೀತ।
ರಾಮಚಂದ್ರನ ನಿಜದೂತ।।
ಯಾಮ ಯಾಮಕೆ ನಿನ್ನಾರಾಧಿಪುದಕೆ।
ಕಾಮಿಪೆ ಎನಗಿದು ನೇಮಿಸಿ ಪ್ರತಿದಿನ।
ಈಮನಸಿಗೆ ಸುಖಸ್ತೋಮವ ತೋರುತ।
ಪಾಮರಮತಿಯನು ನೀ ಮಾಣಿಪುದು।।೧।।

ವಜ್ರಶರೀರಗಂಭೀರ ಮುಕುಟಧರ।
ದುರ್ಜನ ವನಕುಠಾರಾ।

ನಿರ್ಜರ ಮಣಿ ದಯಾ ಪಾರವಾರ ಉದಾರಾ।
ಸಜ್ಜನರಘಪರಿಹಾರಾ।।
ಅರ್ಜುನಗೊಲಿದಂದು ಧ್ವಜವಾನಿಸಿ ನಿಂದು।
ಮೂರ್ಜಗವರಿವಂತೆ ಗರ್ಜನೆ ಮಾಡಿದೆ।
ಹೆಜ್ಜೆ ಹೆಜ್ಜೆಗೆ ನಿನ್ನ ಅಬ್ಜಪಾದದ ಧೂಳಿ।
ಮಾರ್ಜನದಲಿ ಭವವರ್ಜಿತನೆನಿಸೊ।।೨।।

ಪ್ರಾಣ ಅಪಾನವ್ಯಾನೋದಾನ ಸಮಾನಾ।
ಆನಂದಭಾರತಿ ರಮಣಾ।
ನೀನೇ ಶರ್ವಾದಿಗೀರ್ವಾಣಾದ್ಯರಿಗೆ ಜ್ಞಾನಧನಪಾಲಿಪವರೇಣ್ಯ।
ನಾನು ನಿರುತದಲಿ ಏನೇನೆಸಗಿದೆ।।
ಮಾನಸಾದಿ ಕರ್ಮ ನಿನಗೊಪ್ಪಿಸಿದೆನೊ।
ಪ್ರಾಣನಾಥ ಸಿರಿವಿಜಯ ವಿಠಲನ।
ಕಾಣಿಸಿಕೊಡುವುದು ಭಾನುಪ್ರಕಾಶಾ।।೩।।

ಶ್ರೀ ಬ್ರಹ್ಮದೇವರು

ನಿರುಪಮಾನಂದಾತ್ಮಭವ ನಿ।
ರ್ಜರಸಭಾಸಂಸೇವ್ಯ ಋಜುಗಣ।
ದರಸೆ ಸತ್ತ್ವ ಪ್ರಚುರ ವಾಣೀಮುಖಸರೋಜೇನ।
ಗರುಡಶೇಷಶಶಾಂಕದಳಶೇ।
ಖರರ ಜನಕ ಜಗದ್ಗುರುವೆ ತ್ವ।
ಚ್ಚರಣಗಳಿಗಭಿವಂದಿಸುವೆ ಪಾಲಿಪುದು ಸನ್ಮತಿಯ।।

ಶ್ರೀ ಲಕ್ಷ್ಮೀ ದೇವಿಯರು

ಜಗದುದರನತಿವಿಮಲಗುಣರೂ।
ಪಗಳನಾಲೋಚನದಿ ಭಾರತ।
ನಿಗಮತತಿಗಳತಿಕ್ರಮಿಸಿ ಕ್ರಿಯಾವಿಶೇಷಗಳ।।
ಬಗೆಬಗೆಯ ನೂತನವ ಕಾಣುತ।
ಮಿಗೆ ಹರಿಷದಿಂ ಪೊಗಳಿ ಹಿಗ್ಗುವ।
ತ್ರಿಗುಣಮಾನಿ ಮಹಾಲಕುಮಿ ಸಂತೈಸಲನುದಿನವು।।

ಜಯಕೊಲ್ಹಾಪುರ ನಿಲಯೆ

ಜಯಕೊಲ್ಹಾಪುರ ನಿಲಯೆ। ಭಜದಿಷ್ಟೇತರವಿಲಯೇ।।
ತವ ಪಾದೌ ಹೃದಿ ಕಲಯೇ। ರತ್ನರಚಿತವಲಯೇ।।ಪ।।

ಜಯ ಜಯ ಸಾಗರಜಾತೇ। ಕುರುಕರುಣಾಂ ಮಯೆ ಭೀತೆ।।
ಜಗದಂಬಾಭಿಧಯಾ ತೇ। ಜೀವತಿ ತವ ಪೋತೇ।।೧।।

ಜಯ ಜಯ ಸಾಗರಸದನಾ। ಜಯ ಕಾಂತ್ಯಾ ಜಿತಮದನಾ॥
ಜಯ ದುಷ್ಟಾಂತಕಕದನಾ। ಕುಂದಮುಕುಲರದನಾ॥೨॥

ಸುರರಮಣೇನುತಚರಣೇ। ಸುಮನಃಸಂಕಟಹರಣೇ॥
ಸುಸ್ವರರಂಜಿತವೀಣೇ। ಸುಂದರನಿಜಕಿರಣೇ॥೩॥

ಭಜದಿಂದೀವರಸೋಮಾ। ಭವಮುಖ್ಯಾಮರಕಾಮಾ॥
ಭಯಮೂಲಾಳಿವಿರಾಮಾ। ಭಂಜಿತಮುನಿಭೀಮಾ॥೪॥

ಕುಂಕುಮರಂಜಿತಫಾಲೇ। ಕುಂಜರ ಬಾಂಧವ ಲೋಲೇ॥
ಕಲಧೌತಾಮಲಚ್ಛೈಲೇ। ಕೃಂತಕುಜನಜಾಲೇ ॥೫॥

ಧೃತಕರುಣಾರಸಪೂರೇ। ಧನದಾನೋತ್ಸವಧೀರೇ॥
ಧ್ವನಿಲವನಿಂದಿತಕೀರೇ। ಧೀರೆ ದನುಜದಾರೇ॥೬॥

ಸುರಹೃತ್ಪಂಜರಕೀರಾ। ಸುಮಗೇಹಾರ್ಪಿತ ಹಾರಾ॥
ಸುಂದರಕುಂಜವಿಹಾರಾ। ಸುರವರಪರಿವಾರ॥೭॥

ವರಕಬರೀಧೃತಕುಸುಮೇ। ವರಕನಕಾಧಿಕಸುಷುಮೇ॥
ವನನಿಲಯಾದಯ ಭೀಮೇ। ವದನವಿಜಿತಸೋಮೇ॥೮॥

ಮದಕಲಭಾಲಸಗಮನೇ। ಮಧುಮಥನಾಲಸನಯನೇ॥
ಮೃದುಲೋಲಾಲಕರಚನೇ। ಮಧುರಸರಸಗಾನೇ॥೯॥

ವ್ಯಾಘ್ರಪುರೀವರನಿಲಯೇ। ವ್ಯಾಸಪದಾರ್ಪಿತಹೃದಯೇ॥
ಕುರು ಕರುಣಾಂ ಮಯಿ ಸದಯೇ। ವಿವಿಧ ನಿಗಮಗೇಯೇ॥೧೦॥

ಶ್ರೀ ವೇದವ್ಯಾಸ ದೇವರು

ವೇದಪೀಠ ವಿರಿಂಚಿ ಭವ ಶ।
ಕ್ರಾದಿ ಸುರವಿಜ್ಞಾನದಾಯಕ।
ವೋದಚಿನ್ಮಯಗಾತ್ರ ಲೋಕಪವಿತ್ರ ಸುಚರಿತ್ರ॥
ಛೇದಭೇದವಿಷಾದಕುಟಿಲಾಂ।
ತಾದಿಮಧ್ಯವಿದೂರ ಆದಾ।
ನಾದಿಕಾರಣ ಬಾದರಾಯಣ ಪಾಹಿ ಸತ್ರಾಣ॥

ವೇಂಕಟರಮಣನೆ ಬಾರೋ

ವೇಂಕಟರಮಣನೆ ಬಾರೋ ಶೇಷಾಚಲ ವಾಸನೆ ಬಾರೋ।।ಪ।।
ಪಂಕಜನಾಭ ಪರಮ ಪವಿತ್ರ ಶಂಕರ ಮಿತ್ರನೆ ಬಾರೋ।।ಅ.ಪ।।

ಮುದ್ದು ಮುಖದ ಮಗುವೆ ನಿನಗೆ ಮುತ್ತು ಕೊಡುವೆನು ಬಾರೋ
ನಿರ್ದಯವೇಕೋ ನಿನ್ನೊಳಗೆ ನಾನು ಪೊಂದಿದ್ದೇನು ಬಾರೋ।।೧।।

ಮಂಧರ ಗಿರಿಯನೆತ್ತಿದಾನಂದ ಮೂರುತಿಯೆ ಬಾರೋ
ನಂದನಕಂದ ಗೋವಿಂದ ಮುಕುಂದ ಇಂದಿರೆಯರಸನೆ ಬಾರೋ।।೨।।

ಕಾಮನಯ್ಯ ಕರುಣಾಳೊ ಶ್ಯಾಮಲ ವರ್ಣನೆ ಬಾರೋ
ಕೋಮಲಾಂಗ ಶ್ರೀ ಪುರಂದರ ವಿಠಲನೆ ಸ್ವಾಮಿ ರಾಯನೆ ಬಾರೋ।।೩।।

ದೇವ ಬಂದಾ ನಮ್ಮ

ದೇವ ಬಂದ ನಮ್ಮ ಸ್ವಾಮಿ ಬಂದಾನೋ।
ದೇವರ ದೇವ ಶಿಖಾಮಣಿ ಬಂದಾನೋ।।ಪ।।

ಉರಗಶಯನ ಬಂದ।ಗರುಡಗಮನ ಬಂದ।।
ನರಗೊಲಿದವ ಬಂದ। ನಾರಾಯಣ ಬಂದನೋ।।೧।।

ಮಂದರೋದ್ಧರ ಬಂದ। ಮಾಮನೋಹರ ಬಂದ।।
ವೃಂದಾವನಪತಿ । ಗೋವಿಂದ ಬಂದನೋ।।೨।।

ನಕ್ರಹರನು ಬಂದ। ಚಕ್ರಧರನು ಬಂದ।।
ಅಕ್ರೂರಗೊಲಿದ ತ್ರಿ। ವಿಕ್ರಮ ಬಂದನೋ।।೪।।

ಪಕ್ಷಿವಾಹನ ಬಂದ।ಲಕ್ಷ್ಮಣಾಗ್ರಜ ಬಂದ।।
ಅಕ್ಷಯ ಫಲದಾ। ಶ್ರೀಲಕ್ಷ್ಮಿರಮಣ ಬಂದನೋ।।೫।।

ನಿಗಮಗೋಚರ ಬಂದ। ನಿತ್ಯತೃಪ್ತನು ಬಂದ।।
ನಗೆಮುಖ ಪುರಂದರ। ವಿಠಲ ಬಂದನೋ।।೬।।

ಜಯವಾಗಲಿ

ದಾಸಸಾಹಿತ್ಯ ಧ್ವಜಾರೋಹಣಗೀತೆ
ಜಯಗಳು ಆಗಲಿ ಅಪಜಯಗಳು ಪೋಗಲಿ
ಜಯದೇವಿ ರಮಣ ಒಲಿಯಲಿ ಕೋಲೆ
ಜಯದೇವಿ ರಮಣ ಒಲಿಯಲಿ ನಮ್ಮವಿ
ಜಯ ರಾಯರ ಕೀರ್ತಿ ಮೆರೆಯಲಿ ಕೋಲೆ।।

ಹರಿಯೇ ಸರ್ವೋತ್ತಮ ಹರಿಯೇ ಪರದೇವತೆ
ಹರಿದಾಸರೆಂಬೋ ಬಿರುದಿನ ಕೋಲೆ
ಹರಿದಾಸರೆಂಬೋ ಬಿರುದಿನ ಹೆಗ್ಗಾಳೆ
ಹಿರಿ ಬಾಗಿಲೊಳು ನುಡಿಸೇವು ಕೋಲೆ॥

ದಾಸನ ಮಾಡಿಕೊ ಎನ್ನ

ದಾಸನ ಮಾಡಿಕೊ ಎನ್ನ ಸ್ವಾಮಿ
ಸಾಸಿರ ನಾಮದ ವೆಂಕಟರಮಣ॥ಪ॥

ದುರುಬುದ್ದಿಗಳನೆಲ್ಲ ಬಿಡಿಸೊ ನಿನ್ನ
ಕರುಣಕವಚವೆನ್ನ ಹರಣಕ್ಕೆ ತೊಡಿಸೊ
ಚರಣಸೇವೆ ಎನಗೆ ಕೊಡಿಸೊ ಅಭಯ
ಕರ ಪುಷ್ಪವೆನೆನ್ನ ಶಿರದಲ್ಲಿ ಮುಡಿಸೊ॥೧॥

ದೃಡಭಕ್ತಿ ನಿನಲ್ಲಿ ಬೇಡಿ ನಾ
ಅಡಿಗೆರುಗುವೆನಯ್ಯ ಅನುದಿನ ಪಾಡಿ
ಕಡೆಗಣ್ಣಲೇಕೆನ್ನ ನೋಡಿ ಬಿಡುವೆ
ಕೊಡು ನಿನ್ನ ಧ್ಯಾನವ ಮನಶುಚಿ ಮಾಡಿ॥೨॥

ಮರೆಹೊಕ್ಕವರ ಕಾವ ಬಿರುದು
ಎನ್ನ ಮರೆಯದೆ ರಕ್ಷಣೆ ಮಾಡೆನ್ನ ಪೊರೆದು
ದುರಿತಗಳಲ್ಲವ ತರಿದು ಸಿರಿ
ಪುರಂದರವಿಠಲ ಎನ್ನನು ಪೊರೆದು॥೩॥

ಬಿಡೆನೊ ನಿನ್ನಂಘ್ರಿ ಶ್ರೀನಿವಾಸ

ಬಿಡೆನೊ ನಿನ್ನಂಘ್ರಿ ಶ್ರೀನಿವಾಸ ಎನ್ನ ದುಡಿಸಿಕೊಳ್ಳೆಲೋ ಶ್ರೀನಿವಾಸ ನಿ–
ನ್ನುಡಿಯೇಜಿತಲ್ಲೋ ಶ್ರೀನಿವಾಸ ಎನ್ನ ನಡೆತಪ್ಪು ಕಾಯೋ ಶ್ರೀನಿವಾಸ॥ಪ॥

ಬಡಿಯೋ ಬೆನ್ನಲ್ಲಿ ಶ್ರೀನಿವಾಸ ನನ್ನೊಡಲ ಹೊಯ್ಯುದಿರೊ ಶ್ರೀನಿವಾಸ। ನಾ
ಬಡವ ಕಾಣೆಲೊ ಶ್ರೀನಿವಾಸ ನಿನ್ನೊಡಲ ಹೊಕ್ಕೆನೊ ಶ್ರೀನಿವಾಸ॥೧॥

ಪಂಜುಪಿಡಿವೆನೋ ಶ್ರೀನಿವಾಸ ನಿನ್ನೆಂಜಲ ಬಳೆದುಂಬೆ ಶ್ರೀನಿವಾಸ ನಾ
ಸಂಜೆ ಉದಯಕೆ ಶ್ರೀನಿವಾಸ ಕಾಳಂಜೆಯ ಪಿಡಿವೇ ಶ್ರೀನಿವಾಸ॥೨॥

ಸತ್ತಿಗೆ ಚಾಮರ ಶ್ರೀನಿವಾಸ ನಾನೆತ್ತಿ ಕುಣಿವೆನೋ ಶ್ರೀನಿವಾಸ ನಿನ್ನ
ರತ್ನದ ಹಾವಿಗೆ ಶ್ರೀನಿವಾಸ ನಾ ಹೊತ್ತು ಕುಣಿವೆನೋ ಶ್ರೀನಿವಾಸ॥೩॥

ಹೇಳಿದಂತಾಲಿಹೆ ಶ್ರೀನಿವಾಸ ನಿನ್ನಾಳಿಗಾಳಾಗಿಹೆ ಶ್ರೀನಿವಾಸ ಅವ–

ರೂಳಿಗವ ಮಾಳ್ಪೆ ಶ್ರೀನಿವಾಸ ಎನ್ನ ಪಾಲಿಸೋ ಬಿಡದೇ ಶ್ರೀನಿವಾಸ॥೪॥

ನಿನ್ನ ನಾಮ ಹೋಳಿಗೆ ಶ್ರೀನಿವಾಸ ಕಳ್ಳಕುನಿ ನಾನಿಗಿಹೆ ಶ್ರೀನಿವಾಸ ಕಟ್ಟಿ
ನಿನ್ನವರೊದ್ದರೆ ಶ್ರೀನಿವಾಸ ನನಗಿನ್ನು ಲಜ್ಜೇತಕೆ ಶ್ರೀನಿವಾಸ॥೫॥

ಬೀಸಿ ಕೊಲ್ಲಲವರೆ ಶ್ರೀನಿವಾಸ ಮುದ್ರೆ ಕಾಸಿಚುಚ್ಚಲವರೆ ಶ್ರೀನಿವಾಸ ಮಿಕ್ಕ
ಘಾಸಿಗಂಜೆನಯ್ಯ ಶ್ರೀನಿವಾಸ ಎಂಜಲಾಸೆಯ ಬಂಟ ನಾ ಶ್ರೀನಿವಾಸ॥೬॥

ಹೇಸಿ ನಾನಾದರೆ ಶ್ರೀನಿವಾಸ ಹರಿದಾಸರೊಳು ಪೊಕ್ಕೆ ಶ್ರೀನಿವಾಸ ಅವರ
ಭಾಷೆಯ ಕೇಳಿಹೆ ಶ್ರೀನಿವಾಸ ಆವಾಸಿಯ ಸೈರಿಸೊ ಶ್ರೀನಿವಾಸ॥೭॥

ತಿಂಗಳವನಲ್ಲ ಶ್ರೀನಿವಾಸ ವತ್ಸರಂಗಳವನಲ್ಲ ಶ್ರೀನಿವಾಸ ರಾ–
ಜಂಗಳ ಸವಡಿಪೆ ಶ್ರೀನಿವಾಸ ಭವಂಗಳ ದಾಟುವೆ ಶ್ರೀನಿವಾಸ॥೮॥

ನಿನ್ನವ ನಿನ್ನವ ಶ್ರೀನಿವಾಸ ನಾನನ್ಯವನರಿಯೆನು ಶ್ರೀನಿವಾಸ ಅಯ್ಯಾ
ಮನಿಸೊ ತಾಯ್ತಂದೆ ಶ್ರೀನಿವಾಸ ಪ್ರಸನ್ನವೇಂಕಟದ್ರಿ ಶ್ರೀನಿವಾಸ॥೯॥

ಶ್ರೀನಿವಾಸಾ ನೀನೇ ಪಾಲಿಸೊ

ಶ್ರೀನಿವಾಸಾ ನೀನೇ ಪಾಲಿಸೊ, ಶ್ರೀತಜನಪಾಲಾ।
ಗಾನಲೋಲ ಶ್ರೀ ಮುಕುಂದನೇ॥ಪ॥

ಧ್ಯಾನಮಾಳ್ಪ ಸಜ್ಜನರ ಮಾನದಿಂ ಪರಿಪಾಲಿಪ
ವೇಣುಗೋಪಾಲಾ ಗೋವಿಂದ, ವೇದವೇದ್ಯ ನಿತ್ಯಾನಂದ॥ಅ.ಪ॥

ಎಂದಿಗೆ ನಿನ್ನ ಪಾದಬ್ಜವ ಪೊಂದುವ ಸುಖ।
ಎಂದಿಗೆ ಲಭ್ಯವೋ ಮಾಧವಾ॥
ಅಂಧಕಾರಣ್ಯದಲ್ಲಿ, ನಿಂದು ತತ್ತರಿಸುತಿಹೆನೋ।
ಬಂದು ಬಂದು ಈ ಭವದಿ ಬೆಂದು ನೊಂದೆನೋ ಮುಕುಂದ॥೧॥

ಎಷ್ಟು ದಿನ ಕಷ್ಟಪಡುವದೋ ಯಶೋದೆ ಕಂದ।
ದೃಷ್ಟಿಯಿಂದನೋಡಲಾಗದೇ॥ ಮುಟ್ಟಿ ನಿನ್ನಭಜಿಸಲಾರೆ ಕೆಟ್ಟನರಜನ್ಮದೊಳು
ದುಷ್ಟಕಾರ್ಯ ಮಾಡಿದಾಗ್ಯೂ ಇಷ್ಟನಾಗಿ ಕೈಯ ಪಿಡಿದು॥೨॥

ಅನುದಿನ ಅನೇಕ ರೋಗಂಗಳ ಅನುಭವಿಸುವೆನು ಘನಮಹಿಮ ನೀನೇ ಕೇಳಯ್ಯ।
ತನುವಿನಲ್ಲಿ ಬಲವಿಲ್ಲ, ನೆನೆದ ಮಾತ್ರ ಸಲುಹುವ।
ಹನುಮಧೀಶ ಪುರಂದರ ವಿಠಲನೇ ಕೈಯ ಪಿಡಿದು॥೩॥

ದಾಸೋಹಂ ತವ ದಾಸೋಹಂ

ದಾಸೋಹಂ ತವ ದಾಸೋಹಂ॥ಪ॥
ವಾಸುದೇವ ವಿಗತಾಘಸಂಘ ತವ॥ಅ.ಪ॥

ಜೀವಾಂತರ್ಗತ ಜೀವನಿಯಾಮಕ ಜೀವವಿಲಕ್ಷಣ ಜೀವನದ॥
ಜೀವಾಧಾರಕ ಜೀವರೂಪ ರಾಜೀವಭವಜನಕ ಜೀವೇಶ್ವರ ತವ॥೧॥

ಕಾಲಾಂತರ್ಗತ ಕಾಲನಿಯಾಮಕ ಕಾಲಾತೀತ ತ್ರಿಕಾಲಜ್ಞ॥
ಕಾಲಪ್ರವರ್ತಕ ಕಾಲನಿವರ್ತಕ ಕಾಲೋತ್ಪಾದಕ ಕಾಲಮೂರ್ತಿ ತವ॥೨॥

ಕರ್ಮ ಕರ್ಮಕೃತಕರ್ಮಕೃತಾಗಮ ಕರ್ಮಫಲಪ್ರದ ಕರ್ಮಜಿತ॥
ಕರ್ಮಬಂಧ ಮಹಕರ್ಮವಿಮೋಚಕ ಕರ್ಮನಿಗ್ರಹ ವಿಕರ್ಮನಾಶ ತವ॥೩॥

ಧರ್ಮಯೂಪ ಮಹಧರ್ಮವಿವರ್ಧನ ಧರ್ಮವಿದುತ್ತಮ ಧರ್ಮನಿಧೇ
ಧರ್ಮಸೂಕ್ಷ್ಮ ಮಹದ್ಧರ್ಮಸಂರಕ್ಷಕ ಧರ್ಮಸಾಕ್ಷಿಯಧರ್ಮಪುತ್ರ ತವ॥೪॥

ಮಂತ್ರಯಂತ್ರ ಮಹಮಂತ್ರ ಬೀಜ ಮಹಮಂತ್ರರಾಜ ಗುರುಮಂತ್ರಜಿತ॥
ಮಂತ್ರವೇದ್ಯಮಹಮಂತ್ರನಿಯಾಮಕಮಂತ್ರದೇವಜಗನ್ನಾಥವಿಠಲ ತವ॥೫॥

ಸಾಟಿಯುಂಟೆ ಶ್ರೀನಿವಾಸನ

ಸಾಟಿಯುಂಟೆ ಶ್ರೀನಿವಾಸನ ದಾಸ ಕೂಟದ ಮೇಳಕೆ
ಬೂಟಕದ ಮಾತಲ್ಲ ಕೇಳಿರೋ ಭಜನೆ ಮಾಡುವ ತಾಳಕೆ॥ಪ॥

ವಾಸುದೇವನ ವರ್ಣಿಸಲು ಕಮಲಾಸನಾದಿ ಸುಧೇಂದ್ರರು
ದಾಸ ಜನರ ಸಮೂಹದಲೊಗವಾಸವಾಗುತ ನಲಿವರು
ಸೂಸುತಿಹ ಗಂಗಾದಿ ನದಿಗಳು ಬೇಸರದೆ ಬಂದಿರುವುವು
ಕೇಶವನ ಕೊಂಡಾಡ ಧರೆಯೊಳು ಮಿಸಲಳಿಯದ ಮಧುರವು॥೧॥

ಬಾರಿಸುತ ತಂಬೂರಿ ತಾಳವ ನಾರದರ ಸಂಸ್ಮರಿಸುತ
ಬೂರಿ ಕಿಣಿಕಿಣಿ ಮದ್ದಳೆಯ ಜಂಭಾರಿ ಸ್ವರದಿಂದರುಗುತ
ಪಾರಿಜಾಕ್ಷನ ಪರಮ ಮಂಗಳ ಮೂರುತಿಯ ಮುಂದಿರಿಸುತ
ಮಾರುತನ ಮತವರಿತು ಬಹು ಗಂಭೀರ ಸ್ವರದಿಂದರುಗುತ॥೨॥

ಹಿಂದೆಗಳಿಸಿದ ಹಲವು ದುರಿತವು ಕುಂದುವುದು ನಿಮಿಷಾರ್ಧದೆ
ಅಂದಿನಂದಿನ ದೋಷ ದುಷ್ಕೃತ ಒಂದು ನಿಲ್ಲದು ಕಡೆಯಲಿ
ಇಂದಿರಾಧವ ಶೇಷ ಬೂಧರ ಮಂದಿರನು ತಾ ಹರುಷದಿ
ಮುಂದೆ ನಲಿಯುತೆ ಮನಕೆ ಪೂರ್ಣಾನಂದವೀವನು ನಗುತಲಿ॥೩॥

ಪಾಲಯಾಚ್ಯುತ ಪಾಲಯಾಚ್ಯುತ

ಪಾಲಯಾಚ್ಯುತ ಪಾಲಯಾಜಿತ ಪಾಲಯಾ ಕಮಲಾಲಯ।
ಲೀಲಯಾ ಧೃತ ಭೂಧರಾಂಬುರುಹೋದರ ಸ್ವಜನೋದರ॥ಧ್ರುವ॥

ಮಧ್ವಮಾನಸಪದ್ಮಭಾನುಸಮಂ ಸ್ಮರಪ್ರತಿಮಂ ಸ್ಮರ
ಸ್ನಿಗ್ಧನಿರ್ಮಲಶೀತಕಾಂತಿಲಸನ್ಮುಖಂ ಕರುಣೋನ್ಮುಖಂ।
ಹೃದ್ಯ ಕಂಬುಸಮಾನಕಂಧರಮಕ್ಷಯಂ ದುರಿತಕ್ಷಯಂ
ಸ್ನಿಗ್ಧಸಂಸ್ತುತ ರೂಪ್ಯಪೀಠಕೃತಾಲಯಂ ಹರಿಮಾಲಯಮ್॥೧॥

ಅಂಗದಾದಿಸುಶೋಭಿಪಾಣಿಯುಗೇನ ಸಂಕ್ಷಿಭಿತ್ಯೈನಸಂ
ತುಂಗಮಾಲ್ಯಮಣೀಂದ್ರಹಾರಸರೋರಸಂ ಖಲನೀರಸಂ।
ಮಂಗಲಪ್ರದಮಂಥದಾಮವಿರಾಜಿತಮ್ ಭಜತಾಜಿತಂ
ತಂ ಗೃಣೇ ವರರೂಪ್ಯಪೀಠಕೃತಾಲಯಂ ಹರಿಮಾಲಯಮ್॥೨॥

ಪೀನರಮ್ಯ ತನೂದರಂ ಭಜ ಹೇ ಮನಃ ಶುಭ ಹೇ ಮನಃ
ಸ್ವಾನುಭಾವನಿಧರ್ಶನಾಯ ದಿಶಂತಮರ್ಥ್ಯಸುಶಂತಮಂ
ಆನತೋಽಸ್ಮಿ ನಿಜಾರ್ಜಾನಪ್ರಿಯಸಾಧಕಂ ಖಲಬಾಧಕಂ
ಹೀನತೋಜ್ಝಿತ ರೂಪ್ಯಪೀಠಕೃತಾಲಯಂ ಹರಿಮಾಲಯಮ್॥೩॥

ಹೈಮಕಿಂಕಿಣಿಮಾಲಿಕಾರಶನಾಂಜಿತಂ ತಮವಂಚಿತಂ
ಕಮ್ರಕಾಂಚನವಸ್ತ್ರಚಿತ್ರಕಟಿಂ ಘನಪ್ರಭಯಾಮ್ ಘನಂ।
ನಮ್ರನಾಗಕರೋಪಮೋರುಮನಾಮಯಂ ಶುಭಧೀಮಯಂ
ನೌಮ್ಯಹಮ್ ವರರೂಪ್ಯಪೀಠಕೃತಾಲಯಂ ಹರಿಮಾಲಯಮ್॥೪॥

ವೃತ್ತಜಾನುಮನೋಜ್ಞಜಂಘಮವೋಹದಮ್ ಪರವೋಹದಮ್
ರತ್ನಕಲ್ಪನಖತ್ವಿಷಾ ಹೃತಹೃತ್ತಮಸ್ತತಿಮುತ್ತಮಂ।
ಪ್ರತ್ಯಹಂ ರಚಿತಾರ್ಚನಂ ರಮಯ ಸ್ವಯಾ ಗತಯಾ ಸ್ವಯಂ
ಚಿತ್ತ ಚಿಂತಯ ರೂಪ್ಯಪೀಠಕೃತಾಲಯಂ ಹರಿಮಾಲಯಮ್॥೫॥

ಚಾರುಪಾದಸರೋ ಜಯುಗ್ಮರುಚಾಮರೋಚ್ಚಯಚಾಮರೋ–
ದಾರಮೂರ್ಧಜಭಾರಮಂಡಲರಂಜಕಂ ಕಲಿಭಂಜಕಂ।
ವೀರತೋಜಿತಭೂಷಣಂ ವರನೂಪುರಂ ಸ್ವತನೂಪುರಂ
ಧಾರಯಾತ್ಮನಿ ರೂಪ್ಯಪೀಠಕೃತಾಲಯಂ ಹರಿಮಾಲಯಮ್॥೬॥

ಶುಷ್ಕವಾದಿಮನೋಽತಿದೂರತರಾಗವೋತ್ಸವದಾಗಮಂ
ಸತ್ಕವೀಂದ್ರವಚೋವಿಲಾಸಮಹೋದಯಂ ಮಹಿತೋದಯಂ।
ಲಕ್ಯಯಾಮಿ ಯತೀಶ್ವರೈಃ ಕೃತಪೂಜನಂ ಗುಣಭಾಜನಂ
ಧಿಕ್ಕೃತೋಪಮರೂಪ್ಯಪೀಠಕೃತಾಲಯಂ ಹರಿಮಾಲಯಮ್॥೭॥

ನಾರದಪ್ರಿಯಮಾವಿಶಾಂಬರುಹೇಕ್ಷಣಂ ನಿಜರಕ್ಷಣಂ
ತಾರಕೋಪಮಚಾರುದೀಪಚಯಾಂತರೇ ಗತಚಿಂತರೇ।

ಧೀರ ಮಾನಸ ಪೂರ್ಣಚಂದ್ರಸಮಾನಮಚ್ಯುತಮಾನಮ
ದ್ವಾರಕೋಪಮರೂಪ್ಯಪೀಠಕೃತಾಲಯಂ ಹರಿಮಾಲಯಮ್॥೮॥

ರೂಪ್ಯಪೀಠಕೃತಾಲಯಸ್ಯ ಹರೇಃ ಪ್ರಿಯಂ ದುರಿತಾಪ್ರಿಯಂ
ತತ್ಪದಾರ್ಚಕವಾದಿರಾಜಯತೀರಿತಂ ಗುಣಪೂರಿತಂ।
ಗೋಪ್ಯಮಷ್ಟಕಮೇತದುಚ್ಚಮುದೇ ಮಮಾಸ್ತ್ವಿಹನಿರ್ಮಮ
ಪ್ರಾಪ್ಯ ಶುದ್ಧಫಲಾಯ ತತ್ರ ಸುಕೋಮಲಂ ಹೃತಧೀಮಲಂ॥೯॥

ಪ್ರೀಣಯಾವೋ ವಾಸುದೇವಂ

ವಂದಿತಾಶೇಷವಂದ್ಯೋರುವೃಂದಾರಕಂ ಚಂದನಾಚರ್ಚಿತೋದಾರಪೀನಾಂಸಕಮ್।
ಇಂದಿರಾಚಂಚಲಾಪಾಂಗನೀರಾಜಿತಂ ಮಂದರೋದ್ಧಾರಿವೃತ್ತೋದ್ಭುಜಾಭೋಗಿನಮ್॥
ಪ್ರೀಣಯಾವೋ ವಾಸುದೇವಂ ದೇವತಾಮಂಡಲಾಖಂಡಮಂಡನಮ್
ಪ್ರೀಣಯಾವೋ ವಾಸುದೇವಮ್ ॥೧॥

ಸೃಷ್ಟಿಸಂಹಾರಲೀಲಾವಿಲಾಸಾತತಂ ಪುಷ್ಟಪಾಡ್ಗುಣ್ಯಸದ್ವಿಗ್ರಹೋಲ್ಲಾಸಿನಾಮ್।
ದುಷ್ಟನಿಶೇಷಸಂಹಾರಕರ್ಮೋದ್ಯತಂ ಹೃಷ್ಟಪುಷ್ಟಾನುಶಿಷ್ಟಪ್ರಜಾಸಂಶ್ರಯಮ್॥
ಪ್ರೀಣಯಾವೋ ವಾಸುದೇವಂ ದೇವತಾಮಂಡಲಾಖಂಡಮಂಡನಮ್
ಪ್ರೀಣಯಾವೋ ವಾಸುದೇವಮ್ ॥೨॥

ಉನ್ನತಪ್ರಾರ್ಥಿತಾಶೇಷಸಂಸಾಧಕಮ್ ಸನ್ನತಾಲೌಕಿಕಾನಂದದಶ್ರೀಪದಮ್।
ಭಿನ್ನಕರ್ಮಾಶಯಪ್ರಾಣಿಸಂಪ್ರೇರಕಮ್ ತನ್ನ ಕಿಂ ನೇತಿ ವಿದ್ವತ್ಸು ಮೀಮಾಂಸಿತಮ್॥
ಪ್ರೀಣಯಾವೋ ವಾಸುದೇವಂ ದೇವತಾಮಂಡಲಾಖಂಡಮಂಡನಮ್
ಪ್ರೀಣಯಾವೋ ವಾಸುದೇವಮ್ ॥೩॥

ವಿಪ್ರಮುಖ್ಯೈಃ ಸದಾ ವೇದವಾದೋನ್ಮುಖ್ಯೈಃ ಸುಪ್ರತಾಪ್ಯೈಃ ಕ್ಷಿತೀಶೇಶ್ವರೈಶ್ಚಾರ್ಚಿತಮ್।
ಅಪ್ರತರ್ಕ್ಯೋರುಸಂವಿದ್ಗುಣಂ ನಿರ್ಮಲಂ ಸಪ್ರಕಾಶಾಜರಾನಂದರೂಪಂ ಪರಮ್॥
ಪ್ರೀಣಯಾವೋ ವಾಸುದೇವಂ ದೇವತಾಮಂಡಲಾಖಂಡಮಂಡನಮ್
ಪ್ರೀಣಯಾವೋ ವಾಸುದೇವಮ್ ॥೪॥

ಅತ್ಯಂಯೋ ಯಸ್ಯ ಕೇನಾಪಿ ನ ಕ್ವಾಪಿ ಹಿ ಪ್ರತ್ಯಯೋ ಯದ್ಗುಣೇಷೂತ್ತಮಾನಾಂ ಪರಃ।
ಸತ್ಯಸಂಕಲ್ಪ ಏಕೋ ವರೇಣ್ಯೋ ವಶೀ ಮತ್ಸ್ಯನೂನೈಃ ಸದಾ ವೇದವಾದೋದಿತಃ
ಪ್ರೀಣಯಾವೋ ವಾಸುದೇವಂ ದೇವತಾಮಂಡಲಾಖಂಡಮಂಡನಮ್
ಪ್ರೀಣಯಾವೋ ವಾಸುದೇವಮ್ ॥೫॥

ಪಶ್ಯತಾಮ್ ದುಃಖಸಂತಾನನಿರ್ಮೂಲನಮ್ ದೃಶ್ಯತಾಂ ದೃಶ್ಯತಾಮಿತ್ಯಜೇಶಾರ್ಚಿತಮ್।
ನಶ್ಯತಾಮ್ ದೂರಗಂ ಸರ್ವದಾऽಪ್ಯಾತ್ಮಗಮ್ ವಶ್ಯತಾಮ್ ಸ್ವೇಚ್ಛಯಾ ಸಜ್ಜನೇಷ್ವಾಗತಮ್॥
ಪ್ರೀಣಯಾವೋ ವಾಸುದೇವಂ ದೇವತಾಮಂಡಲಾಖಂಡಮಂಡನಮ್
ಪ್ರೀಣಯಾವೋ ವಾಸುದೇವಮ್ ॥೬॥

ಅಗ್ರಜಮ್ ಯಃ ಸಸರ್ಜಾಜಮಗ್ರ್ಯಾಕೃತಿಂ ವಿಗ್ರಹೋ ಯಸ್ಯ ಸರ್ವೇಗುಣಾ ಏವ ಹಿ।
ಉಗ್ರ ಆದ್ಯೋऽಪಿ ಯಸ್ಯಾತ್ಮಜಾಗ್ರ್ಯಾತ್ಮಜಃ ಸದ್ಗೃಹೀತಃ ಸದಾ ಯಃ ಪರಮ್ ದೈವತಮ್॥
ಪ್ರೀಣಯಾವೋ ವಾಸುದೇವಂ ದೇವತಾಮಂಡಲಾಖಂಡಮಂಡನಮ್
ಪ್ರೀಣಯಾವೋ ವಾಸುದೇವಮ್ ॥೭॥

ಅಚ್ಯುತೋ ಯೋ ಗುಣೈರ್ನಿತ್ಯಮೇವಾಖಿಲೈಃ ಪ್ರಚ್ಯುತೋऽಶೇಷದೋಷೈಃ ಸದಾ ಪೂರ್ತಿತಃ।
ಉಚ್ಯತೇ ಸರ್ವವೇದೋರುವಾದೈರಜಃ ಸ್ವರ್ಚಿತೋ ಬ್ರಹ್ಮರುದ್ರೇಂದ್ರಪೂರ್ವೈಃಸದಾ॥

ಪ್ರೀಣಯಾವೋ ವಾಸುದೇವಂ ದೇವತಾಮಂಡಲಾಖಂಡಮಂಡನಮ್
ಪ್ರೀಣಯಾವೋ ವಾಸುದೇವಮ್ ॥೮॥

ಧಾರ್ಯತೇ ಯೇನ ವಿಶ್ವಂ ಸದಾऽಜಾದಿಕಂ ವಾರ್ಯತೇऽಶೇಷದುಃಖಂ ನಿಜಾಧ್ಯಾಯಿನಾಮ್।
ಪಾರ್ಯತೇ ಸರ್ವಮನ್ಯೈರ್ನ ಯತ್ಪಾರ್ಯತೇ ಕಾರ್ಯತೇ ಚಾಖಿಲಂ ಸರ್ವಭೂತೈಃ ಸದಾ॥
ಪ್ರೀಣಯಾವೋ ವಾಸುದೇವಂ ದೇವತಾಮಂಡಲಾಖಂಡಮಂಡನಮ್
ಪ್ರೀಣಯಾವೋ ವಾಸುದೇವಮ್ ॥೯॥

ಸರ್ವಪಾಪಾನಿ ಯತ್ಸಂಸ್ಮೃತೇಃ ಸಂಕ್ಷಯಂ ಸರ್ವದಾ ಯಾಂತಿ ಭಕ್ತ್ಯಾ ವಿಶುದ್ಧಾತ್ಮನಾಮ್।
ಶರ್ವಗುರ್ವಾದಿಗೀರ್ವಾಣ ಸಂಸ್ಥಾನದಃ ಕುರ್ವತೇ ಕರ್ಮ ಯತ್ಪ್ರೀತಯೇ ಸಜ್ಜನಾಃ॥
ಪ್ರೀಣಯಾವೋ ವಾಸುದೇವಂ ದೇವತಾಮಂಡಲಾಖಂಡಮಂಡನಮ್
ಪ್ರೀಣಯಾವೋ ವಾಸುದೇವಮ್ ॥೧೦॥

ಅಕ್ಷಯಂ ಕರ್ಮ ಯಸ್ಮಿನ್ ಪರೇ ಸ್ವರ್ಪಿತಂ ಪ್ರಕ್ಷಯಂ ಯಾಂತಿ ದುಃಖಾನಿ ಯನ್ನಾಮತಃ।
ಅಕ್ಷರೋ ಯೋऽಜರಃ ಸರ್ವದೇವಾಮೃತಃ ಕುಕ್ಷಿಗಂ ಯಸ್ಯ ವಿಶ್ವಂ ಸದಾऽಜಾದಿಕಮ್॥
ಪ್ರೀಣಯಾವೋ ವಾಸುದೇವಂ ದೇವತಾಮಂಡಲಾಖಂಡಮಂಡನಮ್
ಪ್ರೀಣಯಾವೋ ವಾಸುದೇವಮ್ ॥೧೧॥

ನಂದಿತೀರ್ಥೋರುಸನ್ನಾಮಿನೋ ನಂದಿನಃ ಸಂದಧಾನಾಃ ಸದಾऽನಂದದೇವೇ ಮತಿಮ್।
ಮಂದಹಾಸಾರುಣಾऽಪಾಂಗದತ್ತೋನ್ನತಿಂ ನಂದಿತಾಶೇಷದೇವಾದಿವೃಂದಂ ಸದಾ॥
ಪ್ರೀಣಯಾವೋ ವಾಸುದೇವಂ ದೇವತಾಮಂಡಲಾಖಂಡಮಂಡನಮ್
ಪ್ರೀಣಯಾವೋ ವಾಸುದೇವಮ್ ॥೧೨॥

ಶ್ರೀ ವೇಂಕಟೇಶ ಸ್ತೋತ್ರಂ

ವೇಂಕಟೇಶೋ ವಾಸುದೇವಃ ಪ್ರದ್ಯುಮ್ನೋಽಮಿತವಿಕ್ರಮಃ।
ಸಂಕರ್ಷಣೋಽನಿರುದ್ಧಶ್ಚ ಶೇಷಾದ್ರಿಪತಿರೇವ ಚ॥೧॥

ಜನಾರ್ದನಃ ಪದ್ಮನಾಭೋ ವೇಂಕಾಟಾಚಲವಾಸನಃ।
ಸೃಷ್ಟಿಕರ್ತಾ ಜಗನ್ನಾಥೋ ಮಾಧವೋ ಭಕ್ತವತ್ಸಲಃ॥೨॥

ಗೋವಿಂದೋ ಗೋಪತಿಃ ಕೃಷ್ಣಃ ಕೇಶವೋ ಗರುಡಧ್ವಜಃ।
ವರಾಹೋ ವಾಮನಶ್ಚೈವ ನಾರಾಯಣ ಅಧೋಕ್ಷಜಃ॥೩॥

ಶ್ರೀಧರಃ ಪುಂಡರೀಕಾಕ್ಷಃ ಸರ್ವದೇವಸ್ತುತೋ ಹರಿಃ।
ಶ್ರೀನೃಸಿಂಹೋ ಮಹಾಸಿಂಹಃ ಸೂತ್ರಾಕಾರಃ ಪುರಾತನಃ॥೪॥

ರಮಾನಥೋ ಮಹೀಭರ್ತಾ ಭೂಧರಃ ಪುರುಷೋತ್ತಮಃ।
ಚೋಲಪುತ್ರಪ್ರಿಯಃ ಶಾಂತೋ ಬ್ರಹ್ಮಾದೀನಾಂ ವರಪ್ರದಃ॥೫॥

ಶ್ರೀನಿಧಿಃ ಸರ್ವಭೂತಾನಾಮ್ ಭಯಕೃದ್ಭಯನಾಶನಃ।
ಶ್ರೀರಾಮೋ ರಮಭದ್ರಶ್ಚ ಭವಬಂಧೈಕಮೋಚಕಃ॥೬॥

ಭೂತಾವಾಸೋ ಗಿರಾವಾಸಃ ಶ್ರೀನಿವಾಸಃ ಶ್ರಿಯಃ ಪತಿಃ।
ಅಚ್ಯುತಾನಂತಾಗೋವಿಂದೋ ವಿಷ್ಣುರ್ವೇಂಕಟನಾಯಕಃ॥೭॥

ಸರ್ವದೇವೈಕಶರಣಂ ಸರ್ವದೇವೈಕದೈವತಮ್।
ಸಮಸ್ತ ದೇವಕವಚಂ ಸರ್ವದೇವಶಿಖಾಮಣಿಃ॥೮॥

ಇತೀದಂ ಕೀರ್ತಿತಮ್ ಯಸ್ಯ ವಿಷ್ಣೋರಮಿತತೇಜಸಃ।
ತ್ರಿಕಾಲೇ ಯಃ ಪಠೇನಿತ್ಯಂ ಪಾಪಂ ತಸ್ಯ ನ ವಿದ್ಯತೇ॥೯॥

ರಾಜದ್ವಾರೇ ಪಠೇದ್ಘೋರೇ ಸಂಗ್ರಾಮೇ ರಿಪುಸಂಕಟೇ।
ಭೂತಸರ್ಪಪಿಶಾಚಾದಿಭಯಂ ನಾಸ್ತಿ ಕದಾಚನ॥೧೦॥

ಅಪುತ್ರೋ ಲಭತೇ ಪುತ್ರಾನ್ ನಿರ್ಧನೋ ಧನವಾನ್ ಭವೇತ್।
ರೋಗಾರ್ತೋ ಮುಚ್ಯತೇ ರೋಗಾದ್ಬದ್ಧೋ ಮುಚ್ಯೇತ ಬಂಧನಾತ್ ॥೧೧॥

ಯದ್ಯದಿಷ್ಟತಮಂ ಲೋಕೇ ತತ್ತತ್ಪ್ರಾಪ್ನೋತ್ಯಸಂಶಯಃ ।
ಐಶ್ವರ್ಯಂ ರಾಜಸನ್ಮಾನಂ ಭುಕ್ತಿಮುಕ್ತಿಫಲಪ್ರದಮ್॥೧೨॥

ವಿಷ್ಣೋರ್ಲೋಕೈಕಸೋಪಾನಮ್ ಸರ್ವದುಃಖೈಕನಾಶನಮ್।

ಸರ್ವೈಶ್ವರ್ಯಪ್ರದಂ ನೃಣಾಂ ಸರ್ವಮಂಗಲಕಾರಕಮ್॥೧೩॥

ಮಾಯಾವೀ ಪರಮಾನಂದಂ ತ್ಯಕ್ತ್ವಾ ವೈಕುಂಠಮುತ್ತಮಮ್।
ಸ್ವಾಮಿಪುಷ್ಕರಿಣೀತೀರೇ ರಮಯಾ ಸಹ ಮೋದತೇ॥೧೪॥

ಕಲ್ಯಾಣಾದ್ಭುತಗಾತ್ರಾಯ ಕಾಮಿತಾರ್ಥಪ್ರದಾಯಿನೇ।
ಶ್ರೀಮದ್ವೇಂಕಟನಾಥಾಯ ಶ್ರೀನಿವಾಸಾಯ ತೇ ನಮಃ॥೧೫॥

ವೆಂಕಟಾದ್ರಿಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ।
ವೆಂಕಟೇಶಸಮೋ ದೇವೋ ನ ಭೂತೋ ನ ಭವಿಷ್ಯತಿ॥
ಏತೇನ ಸತ್ಯವಾಕ್ಯೇನ ಸರ್ವಾರ್ಥಾನ್ ಸಾಧಯಾಮ್ಯಹಮ್॥೧೬॥

ಕೃಷ್ಣಾರ್ಪಣಮಸ್ತು